ಕರ್ನಾಟಕ ವಿಧಾನ ಸಭೆ

ಸೋಮವಾರ 22ನೇ ಆಗಸ್ಟ್ 1983 / ಆಷಾಢ 31 ಶಕ
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಂಭಾಂಗಣದಲ್ಲಿ
ಸದನವು ಹನ್ನೊಂದು ಗಂಟೆಗೆ ಸಮಾವೇಶಗೊಂಡಿತ್ತು

ಉಪಾಧ್ಯಕ್ಷರು (ಶ್ರೀ ಪಿ. ವೀರಣ್ಣನವರು) ಪೀಠವನ್ನು ಅಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ.— ಬುಕ್ಕಾಪಟ್ಟಣ ಕಳ್ಳಂಬೆಳ್ಳ ಹಾಗಲವಾಡಿ ಮತ್ತು ಹುಳಿಯಾರ ಹೋಬಳಿ ಮುಖ್ಯ ಸ್ಥಳಗಳಲ್ಲಿ ಆಸ್ಪತ್ರೆಗಳಲ್ಲಿ ಹೆರಿಗೆ ಸೌಲಭ್ಯಗಳು

ಪ್ರ. 102(3) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಬುಕ್ಕಾಪಟ್ಟಣ ಕಳ್ಳಂಬೆಳ್ಳ ಹಾಗಲ್ವಾಡಿ ಮತ್ತು ಹುಳಿಯಾರ್ ಗ್ರಾಮಸ್ಥರು ಹೆರಿಗೆ ಸೌಲಭ್ಯಕ್ಕಾಗಿ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಹಾಗಾದರೆ ಸರ್ಕಾರ ಹೆರಿಗೆ ಸೌಲಭ್ಯಕ್ಕಾಗಿ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ. – (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು) :—

ಅ. ಬಂದಿದೆ ;

ಆ. ಹೆರಿಗೆ ವಾರ್ಡನ್ನು ಕಟ್ಟಲು ತಗಲುವ ಶೇಕಡ 50 ಭಾಗ ವಂತಿಕೆ ಹಣವನ್ನು ಸರ್ಕಾರವು ನಿಗಧಿ ಮಾಡಿರುವಂತೆ ಕಟ್ಟಲು ಕಳ್ಳಂಬೆಳ್ಳ, ಬುಕ್ಕ ಪಟ್ಟಣ ಮತ್ತು ಹಾಗಲವಾಡಿ ಗ್ರಾಮ ಪಂಚಾಯಿತಿಯವರು ಮುಂದೆ ಬಂದಿರುವುದಿಲ್ಲ :—

ಹುಳಿಯಾರ್-ಗ್ರಾಮಕ್ಕೆ ಹೆರಿಗೆ. ಸೌಲಭ್ಯಗಳಿರುವ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿರುತ್ತದೆ.

ಶ್ರೀ ಬಿ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ, ಬುಕ್ಕಾಪಟ್ಟಣ, ಹಾಗಲವಾಡಿ ಹಾಗೂ ಹುಳಿಯಾರ ಈ ಗ್ರಾಮಗಳಲ್ಲಿ ಹೆರಿಗೆ ಆಸ್ಪತ್ರೆಗಳು ಇಲ್ಲದೆ ಇರುವುದರಿಂದ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಆ ಗ್ರಾಮದ ಜನರು ವಂತಿಗೆ ಹಣವನ್ನು ಸರ್ಕಾರಕ್ಕೆ ಕೊಟ್ಟರೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆಯೇ ? ಮತ್ತು ಹುಳಿಯಾರದಲ್ಲಿ ಮಹಿಳಾ ಡಾಕ್ಟರ್ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಸರ್ಕಾರದ ಗಮನಕ್ಕೆ ಬಂದಿದ್ದರೆ ಅಲ್ಲಿಗೆ ಮಹಿಳಾ ವೈದ್ಯರನ್ನು ಹಾಕುವ ಏರ್ಪಾಡು ಮಾಡುತ್ತೀರಾ :—

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಂತೆ ಹುಳಿಯಾರು ಗ್ರಾಮದಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿಗೆ ಆದಷ್ಟು ಬೇಗ ಮಹಿಳಾ ವೈದ್ಯರನ್ನು ಹಾಕುವ ಏರ್ಪಾಡು ಸರ್ಕಾರ ಮಾಡುತ್ತದೆ. ಮತ್ತು ಮೂರು ಹಳ್ಳಿಗಳಿಂದ ಸರ್ಕಾರಕ್ಕೆ ಬರಬೇಕಾದಂಥ ವಂತಿಗೆ ಹಣವನ್ನು ಅಂಬರೆ 50 ಪರ್ಸೆಂಟ್ ಹಣವನ್ನು ಒದಗಿಸಿ ಕೊಟ್ಟರೆ ಆದಷ್ಟು ಜಾಗ್ರತೆ ಅಲ್ಲಿಗೆ ಮಂಜೂರಾತಿ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : 103 (18) ಮತ್ತು (31) ಪ್ರಶ್ನೆಗಳು ಒಂದೇ ವಿಷಯವಾಗಿರುವುದ ರಿಂದ, ಒಟ್ಟಿಗೆ ತೆಗೆದುಕೊಳ್ಳಲಾಗುವುದು.

ವಿಷಯ : ಧಾನ್ಯ ವಸೂಲಾತಿ ಪದ್ಧತಿಯ ಗೆ ಸಂಗ್ರಹಿಸಲಾದ ಆಹಾರ ಧಾನ್ಯಗಳು

ಪ್ರ. 103 (18) ಶ್ರೀ ಎಂ. ಆನಂದರಾವ್ ಪೊಗ್ಗ) ಮಾನ್ಯ ಆಹಾರ ಹಾಗೂ ನಾಗರೀಕ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವ -

ಅ. ರಾಜ್ಯದಲ್ಲಿ ಕಳೆದ ಮೂರು ನಾ ತಿಂಗಳ ಅವಧಿಯಲ್ಲಿ ಲೆವಿ ಮೂಲಕ ಸಂಗ್ರಹಿಸಿದ ಧಾನ್ಯದ ಪ್ರಮಾಣವೆಷ್ಟು ;

ಆ. ಲೆವಿ ಸಂಗ್ರಹಣೆಯನ್ನು ತಪ್ಪಿ ಂಡ ಎಷ್ಟು ಮಂದಿ ವರ್ತಕರು ಮತ್ತು ಅಕ್ಕಿ ಗಿರಣಿ ಮಾಲೀಕರ ವಿರುದ್ಧ ಇ.ಸಿ. ಶಾಸನದ ಮೆ ಕ್ರಮ ಕೈಗೊಳ್ಳಲಾಗಿದೆ ;

ಇ. ಎಷ್ಟು ಜನರನ್ನು ಈ ಮೇರೆಗೆ ಶಿಕ್ಷೆಗೆ ಗುರಿಪಡಿಸಲಾಗಿದೆ ?

ಶ್ರೀ ಜಿ. ಬಸವಣಪ್ಪ ಆಹಾ ಗೂ ನಾಗರೀಕ ಸರಬರಾಜು ಮಂತ್ರಿಗಳು :—

ಅ. ಮೇಲೆ ನಮೂದಿಸಿರುವಂತೆ ಅಕ್ಕಿ ಮತ್ತು ಭತ್ತವನ್ನು ಕಳೆದ ಮೂರು ನಾಲ್ಕು ತಿಂಗಳಿನಿಂದ ಲೆವಿ ಮೂಲಕ ಸಂಗ್ರಹಿಸಲಾಗಿದೆ.

ಅಕ್ಕಿ : 2,29,925.58 ಕ್ವಿಂಟಾಲ್

ಭತ್ತ : 2,11,040.77 ಕ್ವಿಂಟಾಲ್

ಆ. 245 ಗಿರಣಿ ಮಾಲೀಕರು ಮತ್ತು 263 ವರ್ತಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಇ. 59 ಜನರಿಗೆ.

ವಿಷಯ : ಧಾನ್ಯ ವಸೂಲಿ ಪದ್ಧತಿ ಮೇರೆಗೆ ವಿವಿಧ ಗಿರಣಿ ಮಾಲೀಕರಿಂದ ಸಂಗ್ರಹಿಸಿದ ಬತ್ತ

ಪ್ರ. 103 (31) ಶ್ರೀ ಬಿ. ಚಿಮ್ಮನಕಟ್ಟಿ (ಬಾದಾಮಿ) ಮಾನ್ಯ ಆಹಾರ ಹಾಗೂ ನಾಗರೀಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

1. 1980-81 1981-82 ಮತ್ತು 1982-83ರಲ್ಲಿ ವಸೂಲಿ ಮಾಡಿದ ಒಟ್ಟು ಲೆವಿ ಭತ್ತ ಎಷ್ಟು ? (10-1-1983ರಿಂದ ಜೂನ್ ಅಂತ್ಯದವರೆಗೆ ಪ್ರತ್ಯೇಕ ಅಂಕಿಸಂಖ್ಯೆಗಳು)

2. 10-1-1980ರಿಂದ 30-6-1983ರವರೆಗೆ ವಿವಿಧ ಅಕ್ಕಿ ಗಿರಣಿ ಮಾಲೀಕರು, ವರ್ತಕರಿಂದ ವಸೂಲು ಮಾಡಿದ ಲೆವಿ ಭತ್ತದ ಪ್ರಮಾಣ (ಗಿರಣಿವಾರು ವಿವರಗಳನ್ನು ತಿಳಿಸಿ).

ವಸೂಲಿ ಮಾಡಲಾದ ಲೆವಿ ಭತ್ತದ ವಿವರ ಈ ರೀತಿ ಇದೆ :—

1. 1980-81	1981-82	1982-83 19-8-83ನೇ ದಿನಾಂಕದವರೆಗೆ
(ಮೆಟ್ರಿಕ್ ಟನ್‌ಗಳಲ್ಲಿ)		
1,02,981	83,703	73,054

10-1-1983ರಿಂದ 30-6-1983ರವರೆಗೆ ಗಿರಣಿದಾರರಿಂದ, ವ್ಯಾಪಾರಸ್ಥರಿಂದ ಮತ್ತು ರೈತರಿಂದ ವಸೂಲಾದ ಒಟ್ಟು ಲೆವಿ ಭತ್ತ 35,739 ಮೆಟ್ರಿಕ್ ಟನ್‌ಗಳು.